**ಮಾನ್ಯ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ**

**ನ್ಯಾಯಾಲಯ, ಹೊಳಲ್ಕೆರೆ**

**ಸಿ.ಸಿ. ನಂ : 1043/2020**

ಸಾಕ್ಷಿದಾರರ ಹೆಸರು : ಕೃಷ್ಣಪ್ಪ ಲಕ್ಕಿಕೋನಿ ಪಿಡಬ್ಲ್ಯೂ:05

ತಂದೆ / ಗಂಡನ ಹೆಸರು : ಜಯಪ್ಪ ಸಿಡಬ್ಲ್ಯೂ:07

ವಯಸ್ಸು : 41 ವರ್ಷ

ಉದ್ಯೋಗ : ಪಿ.ಸಿ.

ವಾಸಸ್ಥಳ : ಚಳ್ಳಕೆರೆ ಪ್ರ.ವ.ಬೋ ದಿ. :29.07.2024

**ಮುಖ್ಯ ವಿಚಾರಣೆ : ಮಾನ್ಯ ಎ.ಪಿ.ಪಿ.ಯವರಿಂದ**

ನಾನು ನವಂಬರ್ 2008 ರಿಂದ ಜುಲೈ 2014 ರವರೆಗೆ ಹೊಳಲ್ಕೆರೆ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ:08.11.2012 ರಂದು ಸಂಜೆ 4.45 ಗಂಟೆಗೆ ಚಾಸ.1 ರವರು ನನ್ನನ್ನು ಕರೆದು ಬಾತ್ಮಿದಾರರಿಂದ ಎಂ.ಜಿ.ಹಳ್ಳಿ ಗೇಟ್ ಬಳಿ ಯಾರೋ ಇಬ್ಬರು ಅಕ್ರಮವಾಗಿ ಯಾವುದೇ ಪರವಾನಗಿ ಇಲ್ಲದೇ ಅಕ್ರಮವಾಗಿ ಸಾರ್ವಜನಿಕರಿಗೆ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂದು ಖಚಿತವಾಗಿ ಮಾಹಿತಿ ಬಂದಿದ್ದು, ದಾಳಿ ಮಾಡಬೇಕೆಂದು ನನಗೆ ಮತ್ತು ಚಾಸ.6 ರವರಿಗೆ ತಿಳಿಸಿರುತ್ತಾರೆ. ನಂತರ ಚಾಸ.1 ರವರು ಸಂಜೆ 4.50 ಗಂಟೆಗೆ ಪಂಚರಾದ ಚಾಸ.2 ಮತ್ತು 3 ರವರನ್ನು ಬರಮಾಡಿಕೊಂಡು ಅವರಿಗೆ ಸದರಿ ಮಾಹಿತಿಯನ್ನು ತಿಳಿಸಿದ್ದು, ನಂತರ ಅವರಿಗೆ ಪಂಚರಾಗಿ ಸಹಕರಿಸಿ ಎಂದು ಕೋರಿದ ಮೇರೆಗೆ ಅವರುಗಳು ಒಪ್ಪಿದ್ದು, ನಾವು, ಅವರು ಚಾ.ಸಾ: 1 ರವರ ಜೊತೆ ಸುಮಾರು ಸಂಜೆ 5.00 ಕ್ಕೆ ಇಲಾಖಾ ಜೀಪಿನಲ್ಲಿ ಠಾಣೆಯಿಂದ ಹೊರಟು ಘಟನಾ ಸ್ಥಳಕ್ಕೆ 5.30 ಗಂಟೆಗೆ ಎನ್.ಜಿ.ಹಳ್ಳಿ ಗೇಟ್‌ಗೆ ಹೋಗಿ, ಸ್ವಲ್ಪ ದೂರದಲ್ಲಿ ಜೀಪನ್ನು ನಿಲ್ಲಿಸಿ ಎಲ್ಲರೂ ಕೆಳಗೆ ಇಳಿದು ನಡೆದುಕೊಂಡು ಘಟನಾ ಸ್ಥಳಕ್ಕೆ ಹೋಗಿ ಮರೆಮಾಚಿ ನಿಂತು ನೋಡಲಾಗಿ ಆರೋಪಿತರು ಎರಡು ರಟ್ಟಿನ ಬಾಕ್ಸ್‌ಳನ್ನು ಇಟ್ಟುಕೊಂಡು ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವುದು ಕಂಡುಬಂದಿದ್ದು, ಆರೋಪಿತರು ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ಓಡಿ ಹೋಗಿದ್ದು, ನಾವು ಅವರನ್ನು ಬೆನ್ನತ್ತಿ ಹಿಡಿಯಲು ಮುಂದಾದಾಗ ಅಲ್ಲಿಯೇ ಇದ್ದ ಜೋಳದ ಹೊಲದಲ್ಲಿ ಹೋಗಿ ತಪ್ಪಿಸಿಕೊಂಡಿರುತ್ತಾರೆ ನಂತರ ನಾವು ಘಟನಾ ಸ್ಥಳಕ್ಕೆ ಬಂದು ಅಲ್ಲಿಯೇ ನಿಂತಿದ್ದ ಚಾಸ.5 ರವರನ್ನು ಓಡಿಹೋದ ಆರೋಪಿತರ ಹೆಸರು ಮತ್ತು ವಿಳಾಸ ಕೇಳಲಾಗಿ ರಾಮಾಂಜನೇಯ ಮತ್ತು ಸಾಕಮ್ಮ ಗಂಡ ಚಂದ್ರಪ್ಪ ಎಂದು ತಿಳಿಸಿದ್ದು, ಅವರನ್ನು ವಿಚಾರಿಸಲಾಗಿ ಆರೋಪಿತರು ಸರ್ಕಾರದ ಯಾವುದೇ ಪರವಾನಗಿ ಇಲ್ಲದೆ

ಅಕ್ರಮವಾಗಿ ಮದ್ಯ ಮಾರಾಟ ಮಾಡುವುದನ್ನು ತಿಳಿಸಿದ ಮೇರೆಗೆ ನಂತರ ನಾವುಗಳು ಸ್ಥಳದಲ್ಲಿದ್ದ ರಟ್ಟಿನ ಬಾಕ್ಸ್‌ಗಳನ್ನು ಪಂಚರ ಸಮಕ್ಷಮ ಪರಿಶೀಲಿಸಲಾಗಿ ಅದರಲ್ಲಿ 180 ಎಂ ಎಲ್ ನ 39 ಓಲ್ಡ್ ತವರನ್ ವಿಸ್ಕಿ ಪೌಚುಗಳಿದ್ದು, ಅವುಗಳ ಅಂದಾಜು ಬೆಲೆ ರೂ.1,950 ರೂಗಳಾಬಹುದು ಎಂದು ಪಂಚರು ಅಭಿಪ್ರಾಯ ಪಟ್ಟಿದ್ದು, ನಂತರ ಮದ್ಯದ ಪೌಚುಗಳಲ್ಲಿ ತಲಾ ಒಂದನ್ನು ಎಫ್.ಎಸ್.ಎಲ್. ಗೆ ಕಳುಹಿಸುವ ಸಲುವಾಗಿ ಅದೇ ರಟ್ಟಿನ ಬಾಕ್ಸ್‌ನಲ್ಲಿ ಹಾಕಿಕೊಂಡು ಅದರ ಬಾಯನ್ನು ದಾರದಿಂದ ಕಟ್ಟಿ ಪಿ.ಆರ್.ಓ. ಎಂಬ ಇಂಗ್ಲೀಷ್ ಅಕ್ಷರಗಳಿಂದ ಸೀಲ್ ಮಾಡಿ ಪಂಚನಾಮೆಯನ್ನು ಬೆಳಗ್ಗೆ 6.00 ರಿಂದ 7.00 ವರೆಗೆ ಪಂಚರ ಸಮಕ್ಷಮ ಜರುಗಿಸಿರುತ್ತೇನೆ. ನಂತರ ಪಂಚನಾಮೆ ಮತ್ತು ವಶಪಡಿಸಿಕೊಂಡ ಮಾಲುಗಳನ್ನು ಠಾಣೆಗೆ ತಂದು ಹಾಜರುಪಡಿಸಿರುತ್ತೇನೆ. ಮಾಲು ಮತ್ತು ಆರೋಪಿತಳನ್ನು ಪುನಃ ನೋಡಿದರೆ ಗುರುತಿಸುತ್ತೇನೆಂದು ದಿಃ 09.11.2012 ರಂದು ಚಾ.ಸಾಃ 1 ರವರ ಮುಂದೆ ಹೇಳಿಕೆ ನೀಡಿರುತ್ತೇನೆ. ಈ ದಿನ ಆರೋಪಿತರು ನ್ಯಾಯಾಲಯದ ಮುಂದೆ ಗೈರು ಹಾಜರಿದ್ದು, ಅವರ ಪರ ವಕೀಲರು ವಿನಾಯಿತಿ ಅರ್ಜಿಯನ್ನು ಸಲ್ಲಿಸಿದ್ದು, ಆರೋಪಿತರ ಗುರುತಿಸುವಿಕೆಯ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ತಿಳಿಸಿದ್ದರಿಂದ ಆರೋಪಿತರನ್ನು ಗುರುತಿಸಲಾಯಿತು ಎಂದು ತೆಗೆದುಕೊಳ್ಳಲಾಗಿರುತ್ತದೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲು ಃ 1 ಮತ್ತು 2 ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಸ್ಥಳ ಪಂಚನಾಮೆಯನ್ನು ಗುರುತಿಸಿದ್ದು ಅದನ್ನು ಈಗಾಗಲೇ ನಿ.ಪಿ.1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.1 (ಇ) ಎಂದು ಗುರುತಿಸಲಾಯಿತು.

## ಪಾಟೀಸವಾಲು : ಆರೋಪಿತರ ಪರ ಶ್ರೀ ಬಿ.ಎಸ್.ಪಿ. ವಕೀಲರಿಂದ

2. ಚಾಸ.2 ಮತ್ತು 3 ರವರನ್ನು ಚಾಸ.1 ರವರು ಬರಮಾಡಿಕೊಂಡಿದ್ದು, ಯಾರ ಮುಖಾಂತರ ಬರಮಾಡಿಕೊಂಡಿರುತ್ತಾರೆಂಬುದು ನನಗೆ ಗೊತ್ತಿಲ್ಲ. ಹೊಳಲ್ಕೆರೆಯಿಂದ ಹೊಸದುರ್ಗ ರಸ್ತೆ ಉತ್ತರ ಮತ್ತು ದಕ್ಷಿಣಾಭಿಮುಖವಾಗಿರುತ್ತದೆ ಎಂದರೆ ಸರಿ. ಎನ್.ಜಿ.ಹಳ್ಳಿ ಮತ್ತು ಕಬ್ಬಳ ರಸ್ತೆ ಪೂರ್ವ ಪಶ್ಚಿಮಾಭಿಮುಖವಾಗಿದೆ ಎಂದರೆ ಸರಿ. ಸದರಿ ರಸ್ತೆಗಳ ಮಧ್ಯೆ ಕೂಡುವ ಸ್ಥಳವನ್ನು ಸರ್ಕಲ್ ಎಂದು ಕರೆಯುತ್ತಾರೆ ಎಂದರೆ ಸರಿ. ಹೊಳಲ್ಕೆರೆ ಮತ್ತು ಹೊಸದುರ್ಗ ರಸ್ತೆಯ ಪೂರ್ವ ದಿಕ್ಕಿನ 1 ಕಿ.ಮೀ. ಅಂತರದಲ್ಲಿ ಕಬ್ಬಳ ಗ್ರಾಮ ಬರುತ್ತದೆ ಎಂದರೆ ಸರಿ. ಸದರಿ ರಸ್ತೆಯ ಮೂಲಕ ಹಲವಾರು ಗ್ರಾಮಗಳು ಬರುತ್ತವೆ ಎಂದರೆ ಸರಿ. ಸದರಿ ಗ್ರಾಮಗಳಿಗೆ ಹೋಗಲು ಗ್ರಾಮಸ್ಥರು ಸದರಿ ಸರ್ಕಲ್‌ಗೆ ಬಂದು ಬಸ್ಸುಗಳನ್ನು ಹತ್ತಬೇಕು ಎಂದರೆ ಸರಿ. ಸದರಿ ಸರ್ಕಲ್ ಬಳಿ ಎಲ್ಲಾ ಬಸ್ಸುಗಳಿಗೂ ನಿಲ್ಲಲು ನಿಲ್ದಾಣ ಇದೆ ಎಂದರೆ ಸರಿ. ಸದರಿ ರಸ್ತೆಯ ಎರಡೂ ಭಾಗಗಳಲ್ಲಿ ಹೋಟೆಲ್‌ಗಳು ಇವೆ ಎಂದರೆ ಸರಿ. ಸದರಿ ರಸ್ತೆಯ ಪಕ್ಕದಲ್ಲಿ ಹಲವಾರು ಅಂಗಡಿಗಳು

ರಸ್ತೆಯ ಬದಿಯಲ್ಲಿ ಇದ್ದವು ಎಂದರೆ ಸರಿ. ಸದರಿ ಸರ್ಕಲ್‌ನಲ್ಲಿ ದಿನನಿತ್ಯ ನೂರಾರು ಜನ ಪ್ರಯಾಣಿಕರು ಬಸ್ಸನ್ನು ಹತ್ತುತ್ತಾರೆ ಮತ್ತು ಇಳಿಯುತ್ತಾರೆ ಎಂದರೆ ಸರಿ. ಸದರಿ ರಸ್ತೆ ನೇರವಾದ ರಸ್ತೆಯಾಗಿದ್ದರಿಂದ ದೂರದಲ್ಲಿ ಬರುವ ವಾಹನಗಳು ಕಾಣಿಸುತ್ತವೆ ಎಂದರೆ ಸರಿ. ನಾವು ಸುಮಾರು 300 ಮೀಟರ್ ದೂರದಲ್ಲಿ ನಮ್ಮ ಇಲಾಖಾ ಜೀಪ್‌ನ್ನು ನಿಲ್ಲಿಸಿರುತ್ತೇವೆ. ನಾವು 300 ಮೀಟರ್ ದೂರದಲ್ಲಿ ಇಲಾಖಾ ಜೀಪನ್ನು ನಿಲ್ಲಿಸಿದ್ದರಿಂದ ಸದರಿ ಜೀಪ್ ಸ್ಥಳದಲ್ಲಿದ್ದವರಿಗೆ ಕಾಣಿಸುತ್ತದೆ ಎಂದರೆ ಸಾಕ್ಷಿಯು ನಾವು ಜೀಪನ್ನುಮರೆಮಾಚಿ ನಿಲ್ಲಿಸಿರುತ್ತೇವೆ ಎಂದು ನುಡಿಯುತ್ತಾರೆ. ನಾವು ಸುಮಾರು 5 ಜನ ಮರೆಮಾಚಿಕೊಂಡು ನಿಂತು ನೋಡಿರುತ್ತೇವೆ. ಆರೋಪಿತರನ್ನು ಹಿಡಿಯಲು ಚಾಸ.1 ರವರು ಮೊದಲು ಹೋಗಿದ್ದು, ನಂತರ ಅವರುಗಳ ಹಿಂದೆ ನಾವೆಲ್ಲರೂ ಹೋಗಿರುತ್ತೇವೆ. ನಾವು 3 ನಿಮಿಷಗಳ ಕಾಲ ಬೆನ್ನತ್ತಿ ಓಡಿ ಹೋಗಿರುತ್ತೇವೆ. ಘಟನಾ ಸ್ಥಳದಲ್ಲಿ ಸುಮಾರು 15 ರಿಂದ 20 ಜನ ಸಾರ್ವಜನಿಕರು ಸೇರಿದ್ದರು. ಅವರುಗಳ ಹೆಸರು ನನಗೆ ಗೊತ್ತಿಲ್ಲ. ಪಂಚರುಗಳು ಎನ್.ಜಿ. ಹಳ್ಳಿ ಗೇಟ್ ಬಳಿ ನಿಂತಿದ್ದರು. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಸಂಗತಿಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ. ಆರೋಪಿತರಿಗೂ ಮತ್ತು ಎಂ.ಒ.1 ಮತ್ತು 2ಕ್ಕೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಮೇಲಾಧಿಕಾರಿಗಳ ಮಾತು ಕೇಳಿ ಇಲಾಖಾ ಅಂಕಿ ಸಂಖ್ಯೆಗಳಿಗೋಸ್ಕರ ಆರೋಪಿತರ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿಕೊಂಡು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿದ ಸಂಗತಿಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ :**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿಯಿದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಹೊಳಲ್ಕೆರೆ